ದಿನಾಂಕಃ **06-04-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>** ಪ್ರತಿವಾದಿ ಪರ ಶ್ರೀ ಪಿ ಡಿ ವಕೀಲರಿಂದ,

1) ನಾನು ವ್ಯವಸಾಯ ಮಾಡುತ್ತೇನೆ. ವಾದಿ ಸುಮಾರು ಏಳೆಂಟು ವರ್ಷಗಳಿಂದ ಪರಿಚಯ ಇರುತ್ತಾರೆ. ವಾದಿ ಜಮೀನಿನ ವಿಷಯವಾಗಿ ಈ ದಾವೆ ದಾಖಲಿಸಿರುತ್ತಾರೆ. ನಿಪಿ 8 ಕರಾರು ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಉಪನೊಂದಣಾಧಿಕಾರಿಗಳ ಕಛೇರಿ ಬಳಿ ವಾದಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. 1 ನೇ ಪ್ರತಿವಾದಿಗೆ ಮೂರು ಜನ ಮಕ್ಕಳು. ಒಬ್ಬ ಗಂಡು ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನಾನು ನಿಪಿ 8 ದಾಖಲೆಗೆ ಉಪನೊಂದಣಾಧಿಕಾರಿಗಳ ಕಛೇರಿ ಬಳಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ವಾದಿ 1 ನೇ ಪ್ರತಿವಾದಿಗೆ 6,50,000/- ಹಣ ನೀಡಿದರು. ಸದರಿ ಹಣ ಎಷ್ಟು ಮುಖಬೆಲೆಯ ನೋಟುಗಳು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಹಣವನ್ನು ಎಣಿಕೆ ಮಾಡಿರುವುದಿಲ್ಲ. ಆಗ ಸಮಯ 4 ರಿಂದ 4-30 ಆಗಿತ್ತು.

2) ವಾದಿ ಮತ್ತು ಪ್ರತಿವಾದಿಗಳು ಒಂದೇ ಗ್ರಾಮದವರು ಎಂದರೆ ಸರಿ. ನಾನು ವಾದಿ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಗಳಿಗೆ ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
**ಮತ್ತು ಪ್ರದನ್ಯಾದಂ., ಕೆ.ಆರ್.ನಗರ**

ದಿನಾಂಕಃ **06-04-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರ ವಕೀಲರಿಂದ,

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

ನಿಪಿ 8 ಕರಾರು ಪತ್ರವನ್ನು ನಾನೇ ತಯಾರು ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಇರುವ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ಈಗಾಗಲೇ ನಿಪಿ 8(ಜೆ) ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಪಿ ಡಿ ವಕೀಲರಿಂದ,

1) ನಾನು ಪತ್ರ ಬರಹಗಾರನಾಗಿ ಪರವಾನಗಿಯನ್ನು 2011 ರಲ್ಲಿ ಪಡೆದುಕೊಂಡಿರುತ್ತೇನೆ. ವಾದಿ ನನ್ನ ಬಳಿ ನಿಪಿ 8 ಒಂದು ಕರಾರು ಪತ್ರವನ್ನು ಬರೆಸಿರುತ್ತೇನೆ. ವಾದಿ ಗೂಳಿ ರಾಮೇಗೌಡರ ಪರವಾಗಿ ಬರೆದುಕೊಟ್ಟಿರುವ ಕರಾರು ಪತ್ರವನ್ನೂ ಸಹ ನಾನೇ ತಯಾರು ಮಾಡಿರುತ್ತೇನೆ. ನಾನು ಸಾಕಷ್ಟು ಕರಾರುಪತ್ರಕ್ಕೆ ಬಿಕ್ಲಮ್ ದಾರನಾಗಿ ಸಹಿ ಮಾಡಿರುತ್ತೇನೆ. ನಿಪಿ 8 ಕರಾರು ಪತ್ರವನ್ನು ನಮ್ಮ ಅಂಗಡಿ ಬಳಿ ತಯಾರು ಮಾಡಿರುತ್ತೇವೆ. ನಿಪಿ 8 ಕರಾರು ಪತ್ರವನ್ನು ವಾದಿ, ಪ್ರತಿವಾದಿಗಳು ಮತ್ತು ಸಾಕ್ಷಿದಾರರು ಮಾಹಿತಿ ನೀಡಿರುತ್ತಾರೆ. ಕರಾರು ಪತ್ರ ಮಾಡುವ ಕಾಲಕ್ಕೆ ದಾಖಲೆಗಳನ್ನು ಪ್ರತಿವಾದಿ ನೀಡಿರುತ್ತಾರೆ.

2) ನಿಪಿ 8 ಕರಾರು ಪತ್ರವನ್ನು ನನ್ನ ಬಳಿ ಇದ್ದ ಛಾಪಾ ಕಾಗದದ ಮೇಲೆ ಬರೆಯಲಾಗಿದೆ. ಹಣಕಾಸಿನ ವ್ಯವಹಾರ ನನ್ನ ಸಮಕ್ಷಮ ನಡೆದಿರುತ್ತದೆ. ನಿಪಿ 8 ಕರಾರು ಪತ್ರದಲ್ಲಿ ಕ್ರಯದ ಪ್ರತಿಫಲ ಸಂಪೂರ್ಣ ಸಂದಾಯ ವಾಗಿರುತ್ತದೆ. ನಿಪಿ 8 ಕರಾರು ಪತ್ರದಲ್ಲಿ ಉಳಿಕೆ ಹಣ ಎಂದು ಕೈತಪ್ಪಿನಿಂದ ಬರೆಯಲಾಗಿದೆ. ನಿಪಿ 8 ತಯಾರಿ

ಮಾಡುವ ಕಾಲಕ್ಕೆ ಪ್ರತಿವಾದಿಗಳು ಯಾರೂ ಹಾಜರಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಅಕ್ರಮ ಲಾಭ ಪಡೆಯಲು ನಿಪಿ 8 ಕರಾರು ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ರಾಮೇಗೌಡರವರು ಮಾಡಿಕೊಂಡಿರುವ ಕರಾರು ಪತ್ರಗಳಿಗೆ ನಾನೇ ಬಿಕ್ಲಮ್ ದಾರನಾಗಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸಲು ಸುಳ್ಳು ಕರಾರು ಪತ್ರ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 8 ಕರಾರು ಪತ್ರಕ್ಕೆ ಪ್ರತಿವಾದಿಗಳು ನನ್ನ ಸಮಕ್ಷಮ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
**ಮತ್ತು ಪ್ರದನ್ಯಾದಂ., ಕೆ.ಆರ್.ನಗರ**